145 ಶಿ6 ಡಿ ನೇ ಮಹ
ರಿ-72
ರಿ-66

# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಹಾಗೂ ಮೋಹನ್ ಕುಮಾರ್ ಕೊಂಡಜ್ಜಿ ಇವರುಗಳು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.

ಪ್ರಶ್ನೆ:-

ಬೆಂಗಳೂರಿನ ದೇವರಚಿಕ್ಕನಹಳ್ಳಿ ವಾರ್ಡ್ ನಂ.188 ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಎ.ನಿವೇಶನ 12/1 ಹಂಚಿಕೆಯಾಗಿರುತ್ತದೆ. ಸ್ಥಳೀಯ ಭೂಗಳ್ಳರ ಪರವಾಗಿ ಯಾವುದೇ ಆದೇಶ/ದಾಖಲಾತಿ ಇಲ್ಲದಿದ್ದರೂ ಬಿ.ಡಿ.ಎ. ಒಡೆತನದ ಜಾಗದಲ್ಲಿ ಭೂಗಳ್ಳರು ಅತಿಕ್ರಮಣ ಮಾಡಿ, ಕಾನೂನು ಬಾಹಿರವಾಗಿ ಶೆಡ್‌ಗಳನ್ನು ನಿರ್ಮಿಸಿರುತ್ತಾರೆ. ಅಲ್ಲದೆ ಕಳೆದ ಆರು ತಿಂಗಳಿನಿಂದ ಬಂಕಿನಲ್ಲಿ ದಾಸ್ತಾನು ಮಾಡಲಾದ ಡೀಸೆಲ್‌ನ್ನು ಮಾರಾಟ ಮಾಡಲು ಅಡ್ಡಿಪಡಿಸಿರುತ್ತಾರೆ. ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ಜಂಟಿ ಸರ್ವೆ ಮಾಡಿಸಿದ್ದು, ಅದರಲ್ಲಿ ಸದರಿ ಜಾಗಕ್ಕೂ, ಭೂಗಳ್ಳರಿಗೂ ಯಾವುದೇ ಸಂಬಂಧ ಇಲ್ಲದೆ ಇರುವುದಾಗಿ ಜಂಟಿ ಸರ್ವೆ ಸಮಿತಿ ವರದಿ ನೀಡಿರುತ್ತದೆ. ಈ ಸಂಬಂಧ ಬಿ.ಡಿ.ಎ. ವಿಶೇಷ ಜಾಗೃತ ದಳ (ಸ್ಪೆಷಲ್ ಟಾಸ್ಕ್ ಫೋರ್ಸ್) ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಸದರಿ ಅಧಿಕಾರಿಗಳು ಭೂಗಳ್ಳರ ಜೊತೆ ಶಾಮೀಲಾಗಿ, ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಸಂಸ್ಥೆಗೆ ಯಾವುದೇ ರೀತಿಯ ರಕ್ಷಣೆ ನೀಡದೆ, ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವುದರಿಂದ ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

ಉತ್ತರ:-

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.44 ರಲ್ಲಿನ 3ಎಕರೆ 29ಗುಂಟೆ ಜಮೀನನ್ನು ಪ್ರಾಧಿಕಾರವು ಬಿ.ಟಿ.ಎಂ.4ನೇ ಹಂತ ಬಡಾವಣೆ ನಿರ್ಮಾಣಕ್ಕಾಗಿ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ:ಬಿಡಿಎ/ಅಭೂಸ್ವಾಅ/ಎ1/ಪಿಆರ್/117, ದಿನಾಂಕ:15.12.1988 ರಂದು ಹಾಗೂ ಅಂತಿಮ ಅಧಿಸೂಚನೆ ಸಂಖ್ಯೆ:ಹೆಚ್‌ಯುಡಿ /334/ಎಂಎನ್‌ಎಕ್ಸ್/1990, ದಿನಾಂಕ:03.11.1989 ರಂದು ಹೊರಡಿಸಲಾಗಿದೆ.

ದಿನಾಂಕ:04.10.1993 ರಂದು ಐತೀರ್ಪು ಅನುಮೋದನೆಯಾಗಿದ್ದು, ದಿನಾಂಕ:15.11.1993 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಭೂಪರಿಹಾರದ ಹಣವನ್ನು ಭೂಸ್ವಾಧೀನ ಕಾಯ್ದೆ ಕಲಂ. 30 & 31 ರಡಿ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಠೇವಣಿ ಇಡಲಾಗಿದೆ. ದಿನಾಂಕ:16.06.1994 ರಂದು ಭೂಸ್ವಾಧೀನ ಕಾಯ್ದೆ ಕಲಂ 16(2) ರಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದೆ. ಭೂಸ್ವಾಧೀನದ ಪ್ರಕ್ರಿಯೆಯು ಮುಕ್ತಾಯವಾಗಿದ್ದು, ಸದರಿ ಜಮೀನು ಪ್ರಾಧಿಕಾರದ ಸ್ವತ್ತಾಗಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.44 ರಲ್ಲಿ ಬಿ.ಟಿ.ಎಂ 4 ನೇ ಹಂತ 2ನೇ ಬ್ಲಾಕ್‌ನಲ್ಲಿನ ನಾಗರಿಕ ಸೌಲಭ್ಯ ನಿವೇಶನ ಸಂಖ್ಯೆ 12/1ನ್ನು ರಚಿಸಿದ್ದು, ಇದರ ವಿಸ್ತೀರ್ಣ 1118.28 ಚ.ಮೀ ಅನ್ನು ಮೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಇವರ ಪರವಾಗಿ ಪೆಟ್ರೋಲ್ ಔಟ್‌ಲೆಟ್ ಉದ್ದೇಶಕ್ಕಾಗಿ ಹಂಚಿಕೆ ಮಾಡಿ ದಿನಾಂಕ:4.11.2019 ರಂದು ಗುತ್ತಿಗೆ ಕರಾರು ನೀಡಲಾಗಿದೆ, ಒಟ್ಟಾರೆ ಗುತ್ತಿಗೆ ಮೌಲ್ಯ ರೂ.1,53,33,408/- (ಜಿ.ಎಸ್.ಟಿ ಸೇರಿದಂತೆ) ಪಾವತಿಸಿರುತ್ತಾರೆ ಹಾಗೂ ದಿನಾಂಕ 07.11.2019ರಂದು ಸ್ವಾಧೀನ ಪತ್ರವನ್ನು ನೀಡಲಾಗಿದೆ.

ಶ್ರೀಮತಿ ರುಕ್ಕಮ್ಮ ಕೋಂ ಲೇ ಕೃಷ್ಣಪ್ಪ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ 35143-35147/2019ರಲ್ಲಿ ನೀಡಲಾಗಿರುವ ದಿನಾಂಕ 18.09.2019ರ ಆದೇಶದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ 44 ರಲ್ಲಿನ 37 ಗುಂಟೆ ಜಮೀನಿನ ಭೂ ಸ್ವಾಧೀನ ರದ್ದುಗೊಂಡಿದೆ. ಸದರಿ ರಿಟ್ ಅರ್ಜಿ ಸಂಖ್ಯೆ 35143-35147/2019 ರಲ್ಲಿ ನೀಡಲಾಗಿರುವ ದಿನಾಂಕ 18.09.2019ರ ಆದೇಶವನ್ನು ಪ್ರಶ್ನಿಸಿ, ಪ್ರಾಧಿಕಾರವು ದಾಖಲಿಸಿದ್ದ ರಿಟ್ ಅಪೀಲು ಸಂಖ್ಯೆ 601/2020 [ಎಲ್.ಎ-ಬಿ.ಡಿ.ಎ] ಯು ದಿನಾಂಕ 19.01.2021 ರಂದು ವಜಾಗೊಂಡಿರುತ್ತದೆ.

ಸದರಿ ಸಿ.ಎ. ನಿವೇಶನದಲ್ಲಿ ಅನಧಿಕೃತ ನಿರ್ಮಾಣ ಇರುವುದರಿಂದ ತೆರವುಗೊಳಿಸಲು ಸಹಾಯ ಮಾಡುವಂತೆ ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯವರು ಕೋರಿದ್ದರ ಮೇರೆಗೆ ದಿನಾಂಕ:19.09.2020 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಸ್.ಟಿ.ಎಫ್ ಹಾಗೂ ಸ್ಥಳೀಯ ಹುಳಿಮಾವು ಪೊಲೀಸ್ ಠಾಣೆ ಸಿಬ್ಬಂದಿ ರವರ ನೆರವಿನೊಂದಿಗೆ ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯವರಿಗೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ನೀಡಿ, ಸದರಿ ಸಿ.ಎ. ನಿವೇಶನ ಸಂಖ್ಯೆ 12/1ಕ್ಕೆ ತಂತಿ ಬೇಲಿ ನಿರ್ಮಾಣ ಮಾಡಲು ಪ್ರಾಧಿಕಾರದ ವತಿಯಿಂದ ಸಹಾಯ ಮಾಡಲಾಗಿ, ಸದರಿ ಸಿ.ಎ. ನಿವೇಶನಕ್ಕೆ ತಂತಿಬೇಲಿ ನಿರ್ಮಿಸಿ ಎ.ಸಿ.ಶೀಟಿನ ಕಾಂಪೌಂಡ್ ಅನ್ನು ಹಂಚಿಕೆದಾರರು ನಿರ್ಮಿಸಿಕೊಂಡಿರುತ್ತಾರೆ.

ಶ್ರೀ ಜಯರಾಮ್ ಕೆ ಬಿನ್ ಲೇ ಕೃಷ್ಣಪ್ಪ ಇವರು ದಾಖಲಿಸಿದ್ದ ಎಂ.ಎಫ್.ಎ 2014/2021(ಸಿ.ಪಿ.ಸಿ) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 30.06.2021 ರಂದು ನೀಡಿದ ಆದೇಶದ ಹಿನ್ನೆಲೆಯಲ್ಲಿ, ಒ.ಎಸ್.ಸಂಖ್ಯೆ 2087/2021(ಸಿ.ಪಿ.ಸಿ) ರಲ್ಲಿ ಮಾನ್ಯ 19ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಇವರು ದಿನಾಂಕ 16.08.2021 ರಂದು ಅಳತೆ ಕೆಲಸ ನಿರ್ವಹಿಸಿ ವರದಿ ಸಲ್ಲಿಸಲು ಆದೇಶಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.44ರ ಸಂಬಂಧ ಕೋರ್ಟ್ ಕಮೀಷನರ್‌ಗಳಾಗಿ ನೇಮಕಗೊಂಡ ಭೂದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ಪ್ರಾಧಿಕಾರದ ಭೂ ಮಾಪಕರು ಜಂಟಿಯಾಗಿ ಅಳತೆ ಮಾಡಿ ನಕ್ಷೆ ತಯಾರಿಸಿ, ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ನಕ್ಷೆ ಮತ್ತು ವರದಿಯನ್ನು ಸಲ್ಲಿಸಿರುತ್ತಾರೆ.

ಕೋರ್ಟ್ ಕಮಿಷನರುಗಳು ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಸದರಿ ವರದಿಯಲ್ಲಿ ವ್ಯಕ್ತವಾಗಿರುವಂತೆ ಪ್ರಶ್ನಿತ 37 ಗುಂಟೆ ಪ್ರದೇಶಕ್ಕೆ ಪ್ರತ್ಯೇಕವಾದ ಚೆಕ್ಕುಬಂದಿ ವಿವರಗಳನ್ನು ಹಾಜರುಪಡಿಸಿರುವುದಿಲ್ಲ/ ವಾದಿಯು 30 ಗುಂಟೆ ಪ್ರದೇಶದ ಬಗ್ಗೆ ಯಾವುದೇ ಚೆಕ್‌ಬಂದಿಯನ್ನು ಹಾಜರುಪಡಿಸಿರುವುದಿಲ್ಲ ಮತ್ತು ಅಳತೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ತೋರಿಸಿದಂತೆ ಅಳತೆ ಮಾಡಿ ನಕ್ಷೆಯಲ್ಲಿ ವಿವರಗಳನ್ನು ತೋರಿಸಲಾಗಿರುತ್ತದೆ. ಕೋರ್ಟ್ ಕಮೀನಷನರವರು ಸಲ್ಲಿಸಿರುವ ವರದಿಯಲ್ಲಿ ಪ್ರಶ್ನಿತ 37 ಗುಂಟೆ ಪ್ರದೇಶವು ಸಿ.ಎ ನಿವೇಶನ ಸಂಖ್ಯೆ 12/1 ರ ವ್ಯಾಪ್ತಿಯಲ್ಲಿ ಬರುವುದೇ ಅಥವಾ ಇಲ್ಲವೇ ಎಂಬ ಬಗ್ಗೆ ನಿಖರ ಅಂಶವು ವ್ಯಕ್ತವಾಗಿಲ್ಲ ಹಾಗೂ ಕೋರ್ಟ್ ಕಮೀನಷನರವರು ಸಲ್ಲಿಸಿರುವ ವರದಿಯಲ್ಲಿನ ಅಂಶದ ಬಗ್ಗೆ ತೀರ್ಪಿನಲ್ಲಿ ಯಾವುದೇ ನಿರ್ದಿಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ. ಮುಂದುವರೆದು, ".....Consequently the suit of the Plaintiff is dismissed for non prosecution." ಎಂದು ಮಾನ್ಯ ಸಿವಿಲ್ ನ್ಯಾಯಾಲಯವು ದಿನಾಂಕ 14.09.2021 ರಂದು ದಾವೆಯನ್ನು ವಜಾಗೊಳಿಸಿದೆ.

ಪ್ರಾಧಿಕಾರದ ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತ ದಳವು ಸೃಜನೆಯಾದ 1990ನೇ ಸಾಲಿನಿಂದಲೂ ಪ್ರಾಧಿಕಾರದ ಆಸ್ತಿ ಸಂರಕ್ಷಣೆಯ ಕಾರ್ಯವನ್ನು ನಿಸ್ಸಂಶಯವಾಗಿ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರಲಾಗುತ್ತಿದ್ದು, ಯಾವುದೇ ರೀತಿಯಲ್ಲಿಯೂ ಸಹಾ ಭೂಗಳ್ಳರ ಜೊತೆ ಶಾಮೀಲಾಗಿರುವುದಿಲ್ಲ ಹಾಗೂ ಪ್ರಾಧಿಕಾರದ ಸ್ವತ್ತನ್ನು ಅತಿಕ್ರಮಿಸುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ. ಇದೇ ರೀತಿ ಸರ್ಕಾರಿ ಸ್ವಾಮ್ಯದ ಮೆ॥ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯ ಸಿ.ಎ.ನಿವೇಶನ ಸಂಖ್ಯೆ:12/1 ರ ಸ್ವತ್ತನ್ನು ಸದರಿ ಸಂಸ್ಥೆಯವರ ಸುಪರ್ದಿಗೆ ವಹಿಸಲಾಗಿರುತ್ತದೆ. ಸದರಿ ಸ್ವತ್ತಿನ ಮುಂದಿನ ಸಂರಕ್ಷಣೆಯ ಕಾರ್ಯವು ಸದರಿ ಸಂಸ್ಥೆಯವರ ಜವಾಬ್ದಾರಿಯಾಗಿರುತ್ತದೆ. ಹುಳಿಮಾವು ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:39/2020 ರಲ್ಲಿ ಕಲಂ 427, 447 ಐಪಿಸಿ ರೀತ್ಯಾ ಪ್ರಾಧಿಕಾರದ ದಕ್ಷಿಣ ವಿಭಾಗದ ಅಭಿಯಂತರರಿಂದ ಕೆ.ಜಯರಾಮ ರವರ ವಿರುದ್ಧ ದೂರು ದಾಖಲಿಸಲಾಗಿರುತ್ತದೆ. ಅಪರಾಧ ಸಂಖ್ಯೆ 203/2020 ರಲ್ಲಿ ಕಲಂ 427, 447 ಜೊತೆ 34 ಐಪಿಸಿ ರೀತ್ಯಾ ಐ.ಓ.ಸಿ.ಎಲ್ ಸಂಸ್ಥೆಯು ಸಹಾ ಅಪರಿಚಿತ ಕಿಡಿಗೇಡಿಗಳ ವಿರುದ್ಧ ದೂರು ದಾಖಲಿಸಿರುತ್ತದೆ.

ರಿಟ್ ಅಪೀಲು ಸಂಖ್ಯೆ:601/2020 ರ ಆದೇಶದ ವಿರುದ್ಧ ಪ್ರಾಧಿಕಾರದ ವತಿಯಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಎಸ್.ಎಲ್.ಪಿ (ಸಿ) ನಂ.6496/2021 ರಲ್ಲಿ ದಿನಾಂಕ.01.07.2021 ರಂದು "…….In the meantime, Status quo as of today, shall be maintained by the parties with regard to the suit property" ಎಂದು ಆದೇಶವಾಗಿದ್ದು, ಸದರಿ ಎಸ್.ಎಲ್.ಪಿ. ಪ್ರಸ್ತುತ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

---

**ನಅಇ 241 ಬೆಂಭೂಸ್ವಾ 2021**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**